

# ರಾಣಿಯೂ ನಟೀಮಣಿಯೂ...

‘ಭೈರಾದೇವಿ’ ಹಾಗೂ ‘ಅಜಾಗ್ರತ’, ಸದ್ಯಕ್ಕೆ ಈ ಎರಡು ಸಿನಿಮಾಗಳಲ್ಲಿ ತೊಡಗಿಕೊಂಡಿರುವ ನಟಿ ರಾಧಿಕಾ ಕುಮಾರಸ್ವಾಮಿ, ಈ ಎರಡರಲ್ಲೂ ಭಿನ್ನ ಛಾಯೆಯಲ್ಲಿ ಪ್ರೇಕ್ಷಕರ ಮುಂದೆ ಬರುವುದಾಗಿ ಹೇಳಿದ್ದಾರೆ.

‘ಭೈರಾದೇವಿ’ ಸಿನಿಮಾದಲ್ಲಿ ಅಘೋರಿಯಾಗಿ ಕಾಣಿಸಿಕೊಳ್ಳುತ್ತಿದ್ದು, ಹೊಸ ಗೆಟಪ್ ಹಾಗೂ ಪಾತ್ರ ನಿರ್ವಹಣೆಯಲ್ಲಿ ನೋಡುಗರನ್ನು ಅಚ್ಚರಿಗೊಳಿಸುವುದಾಗಿ ಹೇಳಿದ್ದಾರೆ. ಜೊತೆಗೆ, ಆ ಪಾತ್ರಕ್ಕೆ ಜೀವ ತುಂಬುವ ಎಲ್ಲ ಪ್ರಯತ್ನವನ್ನು ಮಾಡಿರುವುದಾಗಿ ತಿಳಿಸಿದ್ದಾರೆ.

‘ಅಜಾಗ್ರತ’ ಸಿನಿಮಾದಲ್ಲಿ ತಮ್ಮ ನಿಜ ಜೀವನದ ಪಾತ್ರವನ್ನೇ ನಿರ್ವಹಿಸುತ್ತಿದ್ದಾರೆ. ಅಂದರೆ, ಚಿತ್ರನಟಿಯಾಗಿಯೇ ರಾಧಿಕಾ ಬಣ್ಣ ಹಚ್ಚಲಿದ್ದಾರೆ. ಹಿಂದಿ ನಟ ಶ್ರೇಯಸ್ ತಲಪಾಡೆ ಅವರೊಂದಿಗೆ ತೆರೆ ಹಂಚಿಕೊಳ್ಳಲಿದ್ದು, ಸೈಕಲಾಜಿಕಲ್ ಥ್ರಿಲ್ಲರ್ ಕಥಾಹಂದರದ ಈ ಸಿನಿಮಾ ಪ್ರೇಕ್ಷಕರಲ್ಲಿ ಕುತೂಹಲ ಬಿತ್ತುತ್ತದೆ ಎಂಬ ಭರವಸೆ ಅವರದ್ದು.

‘ತನ್ನನ್ನು ಮೆಚ್ಚಿ ಕೊಂಡಾಡುವ ಜನರನ್ನು ಮನರಂಜಿಸಬೇಕೆನ್ನುವುದು ಒಬ್ಬ ನಟಿಯ ಗುರಿ. ಆಕೆಯ ಜೀವನದಲ್ಲಿ ಎಲ್ಲವೂ ಚೆನ್ನಾಗಿಯೇ ನಡೆದುಕೊಂಡು ಹೋಗುತ್ತಿದ್ದ ಸಂದರ್ಭ, ಒಂದು ಅನಿಶ್ಚಿತ ಅಪಾಯದ ಪರಿಸ್ಥಿತಿ ಒದಗುತ್ತದೆ. ಆಕೆ ಆ ಅಪಾಯದಿಂದ ಹೇಗೆ ಪಾರಾಗುತ್ತಾಳೆ ಎಂಬುದೇ ನೋಡುಗರಲ್ಲಿ ಆಸಕ್ತಿ ಹೆಚ್ಚಿಸುತ್ತದೆ’ ಎಂದು ರಾಧಿಕಾ ನಿರ್ವಹಿಸಲಿರುವ ಪಾತ್ರದ ವಿವರಣೆ ನೀಡಿದ್ದಾರೆ ಚಿತ್ರದ ನಿರ್ದೇಶಕ ಎಂ. ಶಶಿಧರ್.

ಸಿನಿಮಾದಲ್ಲಿ ಮೂರು ಶೇಡ್‌ಗಳಲ್ಲಿ ರಾಧಿಕಾ ಅವರ ಪಾತ್ರ ಸಾಗಲಿದ್ದು, ಒಮ್ಮೆ ರಾಣಿಯಂಥ ಲುಕ್‌ನಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಇದು ಕಥೆಗೆ ಪ್ರಮುಖ ತಿರುವಾಗಿರುತ್ತದೆ ಎಂಬ ಮತ್ತಷ್ಟು ವಿವರಣೆ ಅವರದ್ದು. ಒಟ್ಟು ಏಳು ಭಾಷೆಗಳಲ್ಲಿ ಪ್ರತ್ಯೇಕವಾಗಿ ಮೂಡಿಬರುತ್ತಿರುವ ಸಿನಿಮಾ ಇದಾಗಿದ್ದು, ಈಚೆಗಷ್ಟೇ ‘ಭೈರಾದೇವಿ’ ಸಿನಿಮಾ ಟೀಸರ್ ಬಿಡುಗಡೆ ಆಗಿದೆ. ‘ಅಜಾಗ್ರತ’ ಸಿನಿಮಾದ ಪೋಸ್ಟರ್ ಕೂಡ ಬಿಡುಗಡೆಯಾಗಿದೆ.



## ಆ್ಯಕ್ಷನ್ ಪಾತ್ರಗಳತ್ತ ಧೀರನ್ ಒಲವು

‘ರೊಮ್ಯಾನ್ಸ್‌ಗಿಂತ ಆ್ಯಕ್ಷನ್ ಪಾತ್ರಗಳನ್ನು ಮಾಡಲು ನನಗೆ ಇಷ್ಟ’ ಎಂದಿದ್ದಾರೆ ನಟ ಧೀರನ್ ರಾಮ್‌ಕುಮಾರ್.

90ರ ದಶಕದಲ್ಲಿ ಮನೆ ಮಗನಂಥ ಪಾತ್ರಗಳನ್ನೇ ಮಾಡಿಕೊಂಡು ಬಂದವರು ನಟ ರಾಮ್‌ಕುಮಾರ್. ಅವರ ಮಗ, ಧೀರನ್ ಕೂಡ ಸಿನಿಮಾ ಹಾದಿಯಲ್ಲಿ ಸಾಗುತ್ತಿದ್ದಾರೆ. ಸಿನಿಮಾಗಳ ಬಗ್ಗೆ ತಮ್ಮಲ್ಲಿರುವ ಅಭಿಲಾಷೆಯನ್ನು ವ್ಯಕ್ತಪಡಿಸಿದ್ದಾರೆ. ತಮಗೆ ರೊಮ್ಯಾನ್ಸ್‌ಗಿಂತ ಆ್ಯಕ್ಷನ್ ಪಾತ್ರಗಳಲ್ಲಿ ತೊಡಗಿಕೊಳ್ಳುವಾಸೆ ಎಂದು ಹೇಳಿದ್ದಾರೆ. ಈ ಬಗ್ಗೆ ಸಣ್ಣ ವಿವರಣೆಯನ್ನೂ ನೀಡಿದ್ದಾರೆ.

“ನನ್ನ ಮೊದಲ ಸಿನಿಮಾ ‘ಶಿವ 143’ಯಲ್ಲಿ ರೊಮ್ಯಾಂಟಿಕ್ ಹುಡುಗನ ಪಾತ್ರ ನಿರ್ವಹಿಸಿದ್ದೇನೆ. ಹೀಗಾಗಿ ಸದ್ಯ ಆ್ಯಕ್ಷನ್ ಹೀರೊ ಆಗಲು ಬಯಸಿದ್ದೇನೆ. ಥ್ರಿಲ್ಲರ್, ಮರ್ಡರ್ ಮಿಸ್ಟರಿ ಹಾಗೂ ಹಾರರ್ ಸಿನಿಮಾಗಳ ಬಿಂಜ್ ವಾಚಿಂಗ್ ಅನ್ನು ನಾನು ತುಂಬಾ ಇಷ್ಟಪಡುತ್ತೇನೆ” ಎಂದಿದ್ದಾರೆ.

‘ನನ್ನ ತಂದೆ ಸಿನಿಮಾದಲ್ಲಿ ನಟಿಸುತ್ತಿದ್ದ ಕಾಲ ಸಂಪೂರ್ಣ ಬೇರೆಯಾಗಿತ್ತು. ಈಗ ಸಾಕಷ್ಟು ವಿಷಯಗಳು ಬದಲಾಗಿವೆ. ಪರಂಪರೆಯನ್ನು ಸುಮ್ಮನೆ ಕಣ್ಣುಮುಚ್ಚಿಕೊಂಡು ಅನುಸರಿಸುವುದಕ್ಕಿಂತ, ನಟರಾಗಿ, ಯಾವುದೇ ನಿರ್ಧಾರ ತೆಗೆದುಕೊಳ್ಳುವ ಮುನ್ನ ಎಲ್ಲಾ ಆಯಾಮಗಳನ್ನೂ ಲೆಕ್ಕ ಹಾಕಬೇಕು’ ಎಂದು ಹೇಳಿಕೊಂಡಿದ್ದಾರೆ.

ಜೊತೆಗೆ ಪ್ರೇಕ್ಷಕರಿಗೆ ತಮ್ಮನ್ನು ಹತ್ತಿರ ಮಾಡುವಂಥ ಪಾತ್ರಗಳು ಮೊದಲ ಆದ್ಯತೆಯಾಗಿದ್ದು, ಈ ಗುರಿಯತ್ತಲೇ ತಮ್ಮ ಗಮನ ನೆಟ್ಟಿರುವುದಾಗಿ ತಿಳಿಸಿದ್ದಾರೆ.